Regd No M 1299 34 th Year ತಾ॥ 9—1—51

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1—14—0

ಸತ್ಯವಾದಿ
SATYAVADI

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣ
[ತಿಂಗಳಿಗೊಂದಾವರ್ತ]
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

ಸುದ್ದಿಗಳು

ನೇಪಾಳ ಪಾರ್ಲಿಮೆಂಟ್ ಹಾಗೂ ಅಲ್ಲಿನ ಶ್ರೇಷ್ಠ ಸಭೆ ರಾಜಾ ತ್ರಿಭುವನರು ನೇಪಾಳಕ್ಕೆ ಆಗಮಿಸಿ ಸಿಂಹಾಸನವೇರಬೇಕೆಂದು ನಿರ್ಧರಿಸಿದೆ ಭಾರತ ಸಲಹೆಗಳೂ ಮಾನ್ಯವಾಗಿವೆ.

o o

ಭಾರತ-ಬ್ರಿಟನ್ ವಿಮಾನ ಯಾನ ಒಡಂಬಡಿಕೆಗಾಗಿ ಬ್ರಿಟಿಷ್ ಸರ್ಕಾರದ ಸಿವಿಲ್ ಏವಿಯೇಷನ್ ಇಲಾಖೆ ಅಂಡರ್ ಸೆಕ್ರಿಟರಿ ಸರ್ ಜಾರ್ಜ್ ಗ್ರಿಬೆಟ್ ಭಾರತಕ್ಕೆ ಬರುವರು.

o o

ಅಟ್ಲಾಂಟಿಕ್ ಒಪ್ಪಂದ ಸೈನ್ಯದ ರಚನೆ ವ್ಯವಸ್ಥೆಗಾಗಿ ಐರ್ಸ್ ಹೋವರರು ಪೇರಿಸಿಗೆ ಬಂದಿರುವರು.

o o

ಮೊನ್ನೆ ಪಾಕ್ ಪ್ರಧಾನಿ ಲಿಯಾಕತ್ ಆಲಿ ಲಂಡನ್‌ಗೆ ಆಗಮಿಸಿದೊಡನೆ ಅಧ್ಭುತ ಸ್ವಾಗತ ಸಿಕ್ಕಿತು.

o o

ವಿಶ್ವ ಶಾಂತಿ ಸ್ಥಾಪನೆಗೆ ಆಹಾರ ಬಗೆಗೆ ಯೋಗ್ಯವಾದ ಯೋಜನೆ ಹಾಗೂ ಉತ್ಪತ್ತಿ ಕ್ರಮ ಅಗತ್ಯ ಎಂದು ಬ್ರಿಟನ್ನಿನ ವ್ಯವಸಾಯ ವೈಜ್ಞಾನಿಕ ಸರ್ ಜಾನ್ ರಸಲ್ ಮೊನ್ನೆ ಕೊಯಮುತೂರ್‌ನಲ್ಲಿ ತಿಳಿಸಿದ್ದಾರೆ.

o o

53 ನೇ ವರ್ಷದಲ್ಲಿ ಪಾನ್ ಇಂಡಿಯನ್ ಓಷನ್ ಕಾಂಗ್ರೆಸ್ ಮುಂದಿನ ಅಧಿವೇಶನ ಆಸ್ಟ್ರೇಲಿಯದಲ್ಲಿ ಸೇರುತ್ತೆ.

o o

ವಿಶ್ವಸಂಸ್ಥೆಯ 8 ನೇ ಪಡೆಗಳನ್ನ ನಾಶಪಡಿಸಲು ಮುನ್ನುಗ್ಗುತ್ತಿರುವ ಕೆಂಪು ಸೇನೆಯನ್ನು ಪ್ರತಿಭಟಿಸಲು ಕೊರಿಯಕ್ಕೆ ದೂರಪೂರ್ವ ಪಡೆಗಳ ವಿಮಾನವನ್ನು ವೆಕಾರ್ಥರರು ಕಳಿಸಿದ್ದಾರೆ.

o o

ರಬ್ಬರಿನ ಬೆಲೆ ಭಾರತದಲ್ಲಿ ತೀವ್ರವಾಗುತ್ತಿದೆ.

o o

ಡಾ| ಸೀತಾರಾಂ. ಸರ್ ಮಿರ್ಜ ಇವರಲ್ಲೋರ್ವರು ಹೈದರಾಬಾದ್ ಪ್ರಧಾನಿಗಳಾಗುವ ವಾರ್ತೆ ಇದೆ.

— ದಿವ್ಯವಾಣಿ —

ಗುಲಾಮನಂತೆ ದುಡಿಯುವವನು ರಾಜನಂತೆ ತಿನ್ನುತ್ತಾನೆ.

— ಚಂಗ್ ಚೌ.

ಭಂಗಾರದ ಬೆಲೆ ಯೂರೋಪಿನಲ್ಲಿ ಏರುತ್ತಿದೆ.

o o

ಜಗತ್ ಶಾಂತಿ ಮಾತೇ ಕಾವನ್ ವೆಲ್ತ್ ಸಚಿವ ಪರಿಷತ್ತಿನಲ್ಲಿಲ್ಲವೆಂದು ರಷ್ಯದ ಪ್ರಾವ್ಡಾ ಬರೆದಿದೆ

o o

ಮೈಸೂರು ಪ್ರಧಾನಿ ಶ್ರೀ ಕೆ. ಸಿ. ರೆಡ್ಡಿಗಳು ಇಂದಿನಿಂದ ಕೆಲಸಕ್ಕೆ ಹಾಜರಾಗುವರು

o o

ಚೀಣದೊಡನೆ ಶಾಂತಿ ಒಪ್ಪಂದಕ್ಕೆ ಬರಲು ದಲಾಯಿ ಲಾಮ ಕಾತುರರಿದ್ದಾರೆ ಈ ಬಗೆಗೆ ಭಾರತದ ಮಧ್ಯಸ್ಥಿಕೆ ಕೇಳಲಾಗುವದು

o o

ಪ್ರಧಾನಿ ಲಿಯಾಕತ್ ಲಂಡನ್ನಿನಲ್ಲಿ ಹತ್ತು ದಿವಸಗಳಿರುವರು

o o

ಕೇಂದ್ರ ಸಚಿವ ಶ್ರೀ ಮೆಹಾತಾಬರ ಮುಂದೆ ಮದರಾಸಿನಲ್ಲಿ ದ್ರವಿಡ ಕಜಗಂನ 15 ಮಂದಿ ಕಪ್ಪು ಬಾವುಟ ಹಿಡಿದರು.

o o

ಕೆಂಪು ಚೀಣ ನಿಯೋಗ ಧುರೀಣರಾಗಿ ವಿಶ್ವಸಂಸ್ಥೆಗೆ ಹೋಗಿದ್ದ ಪುಡಿನ ಚೌರನ್ನು ಚೀಣ ವಿದೇಶ ಸಚಿವರನ್ನಾಗಿ ಸೇಮಿಸಲಾಗಿದೆ

o o

ಭಾರತ ರಕ್ಷಣಾ ಶಾಸನದನ್ವಯ ನಿನ್ನೆ ದಿನ ಮೈಸೂರು ನಗರದ ಪ್ರಥಮ ನ್ಯಾಯಾಧೀಶರು ಧರ್ಮಾರತ್ನಾಕರ ಶ್ರೀ ಕೆ. ನಂದೀಬಸಪ್ಪನವರ ಮೇಲೆ ಭತ್ತ ದಾಸ್ತಾನಿನ ಆರೋಪದ ಮೇಲೆ ಛಾರ್ಜ್ ಹೊರಿಸಿದ್ದಾರೆ. ಶ್ರೀಯುತರು ತಪ್ಪಿತಸ್ಥರಲ್ಲವೆಂದು ತಿಳಿಸಿದ್ದಾರೆ.

o o

ಪಂ|| ನೆಹರು ಮಾನವ ಜನಾಂಗದ ಆಶಾ ಸಂಕೇತ ಎಂದು ಸಿಂಗಪುರದ ಬ್ರಿಟಿಷ್ ಪತ್ರಿಕೆ ಸ್ಟೇಟ್ ಟೈಂಸ್ ಬರೆದಿದೆ

ವಾಪಾರಿಗಳ ಮೇಲೆ ಜನರ ಕಾವಲೇರ್ಪಾಟಾಗಿದೆ

ಪಾರ್ತೆಗಳು

ಕಾಶ್ಮೀರದ ಸಮಸ್ಯೆ ಇತ್ಯರ್ಥವಾದರೆ ಮಾತ್ರ ಶಾಂತಿ ಪಾಲನೆ ಸಾಧ್ಯ ಎಂದು ಪ್ರಧಾನಿ ಲಿಯಾಕತ್ ಲಂಡನ್‌ನಲ್ಲಿ ತಿಳಿಸಿದ್ದಾರೆ.

o o

ಶ್ರೀ ವಿ. ಪಿ. ಮೆನನರು ಬೆಂಗಳೂರಿಂದ ನಿನ್ನೆ ತಿರುವಾಂಕೂರಿಗೆ ತೆಂಳಿದರು.

o o

ರಾಜಕೋಟೆ— ಸೌರಾಷ್ಟ್ರ ಶಾಸನ ಸಭೆಯೆ ಮುಂದಿದ ಅಧಿವೇಶನದಲ್ಲಿ ಬರುವದಾಗಿದ್ದ 'ಹೆಣಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗಬಾರದೆಂಬ ಮಸೂದೆಯನ್ನು ಅದನ್ನು ಮಂಡಿಸಲಿದ್ದ ಸದಸ್ಯರು ವಾಪಸ್ಸು ತೆಗೆದುಕೊಂಡಿದ್ದಾರೆ

o o

ನವದೆಹಲಿ— ಸೈನ್ಯದ ಪತ್ರಿಕೆಗಳಲ್ಲಿ ಸ್ತ್ರೀವೇಷ ಧರಿಸಿದ ಸೈನಿಕರ ಭಾವಚಿತ್ರಗಳನ್ನು ಪ್ರಕಟಿಸಕೂಡದೆಂದು ಆಜ್ಞೆ ಹೊರಡಿಸಲಾಗಿದೆ.

o o

ಶ್ರೀ ಟಿ. ಪ್ರಕಾಶಂರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ತಿರುಪತಿಯಲ್ಲಿ ಸೇರಿದ್ದ ಕಾಂಗ್ರೆಸ್ ಪ್ರಜಾ ಪಕ್ಷವು ಗ್ರಾಮ ತಾಲ್ಲೂಕ ಜಿಲ್ಲಾ ಸಮಿತಿಗಳನ್ನು ಸ್ಥಾಪನೆ ಮಾಡಬೇಕೆಂದು ತೀರ್ಮಾನ ಮಾಡಿತು.

o

ಕೇಂದ್ರದ ಕೈಗಾರಿಕ ಮಂತ್ರಿ ಶ್ರೀ ಹರೆ ಕೃಷ್ಣ ಮೆಹತಾಬರು ಮದರಾಸಿನಲ್ಲಿ ನಿನ್ನೆ ದಿನ ಹೇಳಿಕೆಯಿತ್ತು ಭಾರತ ಸರ್ಕಾರ ಸೀಮೆಂಟು ಕಂಟ್ರೋಲ್ ವಜಾ ಮಾಡಲು ನಿರ್ಧರಮಾಡಿದೆಯೆಂದರು.

o o

ಕೆಂಪು ಚೀಣದ ಮೇಲೆ ಆರ್ಥಿಕ ಧಿಗ್ಬಂಧನವನ್ನು ಜಾರಿ ಮಾಡುವುದು ಸರಿಯಲ್ಲವೆಂದು ಪಂ|| ನೆಹರು ಸ್ಪಷ್ಟಪಡಿಸಿದ್ದಾರೆಂದು ಲಂಡನ ವಾರ್ತೆ.

ತಂಜಾವೂರಿನ ಕಲೆಕ್ಟರರು ಅಕ್ಕಿ ಮತ್ತು ಭತ್ತ ವ್ಯಾಪಾರಿಗಳು ಅಕ್ರಮ ವ್ಯಾಪಾರ ಮಾಡದಂತೆ ನೋಡಲು ಸಾರ್ವಜನಿಕ ಪ್ರಮುಖರು ಹಲವರನ್ನು ನೇಮಕ ಮಾಡಿದ್ದಾರೆ

ನಿನ್ನೆ ಮಧ್ಯಾಹ್ನ ಬೆಂಗಳೂರಿನಲ್ಲಿ ಶ್ರೀ ದಾಸಪ್ಪನವರ ಅಧ್ಯಕ್ಷತೆಯಲ್ಲಿ 2 ಗಂಟೆಗಳ ಕಾಲ ಸಚಿವ ಮಂಡಳಿ ಸಭೆ ಜರಗಿತು ಶ್ರೀ ಮೆನನರು ಹಾಜರಿದ್ದರೆಂದು ಹೇಳಲಾಗಿದೆ. ಸಂಜೆ ಶ್ರೀ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಚಿವ ಮಂಡಳಿ ಸಭೆಯಲ್ಲಿ ಮೆನನರೊಡನೆ ನಡೆದ ಸಮಾಲೋಚನೆ ಬಗ್ಗೆ ತಿಳಿಸಲಾಯಿತು.

o o

ಮುಂದಿನ ವರ್ಷ ಎಪ್ರಿಲದ ವರಿಗೆ ಕುದುರೆ ಸಂದ್ಯ ನಡೆಸಲು ಅನುಮತಿ ಕೊಡಲು ಮದರಾಸು ರಾಜ್ಯ ಸಂಮತಿಸಿದೆ

o o

ವಿಶ್ವದಲ್ಲಿ 7 ಕೋಟಿ ಟೆಲಿಪೋನುಗಳಿವೆಯೆಂದು ನ್ಯೂಯಾರ್ಕ್ ವಾರ್ತೆ

o o

ಬ್ರಿಟನ್ ನೌಕೆಗಳು ಕಳೆದ ವರ್ಷ 30 ಲಕ್ಷ ಮೈಲಿಗಳಷ್ಟು ಸುತ್ತಿವೆ

o o

ಬರ್ಡ್ವಾನ್ ಜಿಲ್ಲೆಯಲ್ಲೊಬ್ಬ ನೇಪಾಳ ಬಾಬ ಅವತರಿಸಿದ್ದಾನೆ ಅಲ್ಲಿನ ಮೋಟೇಶ್ವರದಲ್ಲಿ ಮುಸ್ಲಿಂ ದರ್ಜಿಯವನೊಬ್ಬ ಪೀರನ ಪ್ರಭಾವದಿಂದ ಸರ್ವರೋಗವು ನಿವಾರಣೆಯಾಗಲು ವಿಚಿತ್ರ ಔಷಧಿ ಕೊಡುತ್ತಿರುವುದಾಗಿ ಕಲ್ಕತ್ತ ವಾರ್ತೆ.

o o

ಬೆಂಗಳೂರಿಗೆ ಕಾಂಗ್ರೆಸ್ ಶಾಸನ ಸಭಿಕರು ಬರುತ್ತಿರುವ ವರದಿ ಇದೆ ನಾಳೆ ಶ್ರೀ ರೆಡ್ಡಿಗಳು ಕಾಂಗ್ರೆಸ್ ಪಕ್ಷದ ಸಭೆ ನಡೆಸಿ ವಿಶ್ವಾಸ ಕೋರುವರು ಸಭೆ ಸೇರುವದು ಕುಮಾರ ಪಾರ್ಕಿನಲ್ಲಿ

ಇದನ್ನು ನಿರ್ಧರಿಸಬಲ್ಲಿರಾ ?

ಶ್ರೀ ರಾಮಚಂದ್ರಮೂರ್ತಿಯು ಸೀತಾ ಲಕ್ಷ್ಮಣ ಸಮೇತನಾಗಿ ಅರಣ್ಯ ವಾಸವನ್ನು ಮಾಡಿದ ಕಾಲದಲ್ಲಿ ನಿವಾಸ ಮಾಡಿಕೊಂಡಿದ್ದ ಪಂಚವಟಿಯು ನಾಸಿಕಾ ಕ್ಷೇತ್ರದ ಸಮೀಪದಲ್ಲಿರುವ ಸ್ಥಳವೆಂದು ಮಹಾರಾಷ್ಟ್ರರು ಹೇಳುತ್ತಾರೆ ; ಹಾಗಲ್ಲ, ಭದ್ರಾಚಲದ ಸಮೀಪದಲ್ಲಿಯು 'ಪರ್ಣಶಾಲೆ' ಯೆಂದು ಆಂಧ್ರರು ಹೇಳುತ್ತಾರೆ.

ಏಸು ಕ್ರಿಸ್ತನು ವ್ಯವಹರಿಸಿದ ಪವಿತ್ರ ಭೂಮಿಯು ವ್ಯಾಲಿಸ್ಟೈನು ಎಂದು ಎಲ್ಲರೂ ಇದುವರೆಗೂ ಹೇಳುತ್ತಿರುವರಷ್ಟೆ ! ಆದರೆ ಇದು ಲಂಡನ್ ನಗರದಲ್ಲಿಯ ಪ್ರಚುರಣಕರ್ತನಾದ ಬ್ಯೂಮೌಂಟ್, ಆ ಪವಿತ್ರ ಭೂಮಿಯು ಪ್ಯಾಲಿಸ್ಟೈನ್ ಅಲ್ಲ, ಬ್ರಿಟೇಷು ದ್ವೀಪಗಳು ಎಂದು ಹೇಳುತ್ತಿದ್ದಾನೆ. ಸೃಷ್ಟಿಯಲ್ಲಿ ಆದಿ ದಂಪತಿಗಳು ಆದ ಆದಂ ಮತ್ತು ಈವರು ದಿಗಂಬರರಾಗಿ ವಿಹರಿಸಿದ ಈಡನ್ ತೋಟವು ಬ್ರಿಟನ್ನಿನಲ್ಲಿಯು ಸಾಮರ್‌ಸೆಟ್ ಕೌಂಟಿಯಲ್ಲಿರುವದೆಂದು ಈತನ ವಾದವಾಗಿದೆ. ಮಾನವ ನಾಗರೀಕತೆಗೆ ಜನ್ಮ ಸ್ಥಾನವು ಮಧ್ಯ ಏಷ್ಯವೆಂದು ಹಲವರು ಹೇಳುತ್ತಿರುವಾಗ, ಈಗ ಸ್ಕಾಟ್ಲೆಂಡಿನಲ್ಲಿ ನಿರ್ಜನಸ್ಥಾನವಾಗಿರುವ ಉತ್ತರ ಕೊನೆ ಎಂಬುದು ಈತನ ಮತವಾಗಿದೆ. (ಓಂ)

ಅಪೇರಾ ಜಯಪ್ರದ 2 ನೇ ವಾರ

ಶ್ರೀ ಕೃಷ್ಣನ ಮನಸೆಳೆವ ಬಾಲಲೀಲೆಗಳು ಕಂಸ ವಧೆ ಸಂಬಂಧದ ದೃಶ್ಯಗಳು
ಕಂತಲಾಮಲಕವಾಗಿ ಪ್ರದರ್ಶಿಸುವ ಸೊಗಸಾದ ತಮಿಳು ಚಿತ್ರ

ಕೃಷ್ಣವಿಜಯ

ಪ್ರೇಮಾವತಿ, ನರಸಿಂಹ ಭಾರತಿ, ಲಲಿತ, ಪದ್ಮಿನಿ ಅಭಿನಯಿಸಿರುವರು
ಪ್ರತಿ ದಿನ 3 ಆಟಗಳು

ರಣಜಿತ್ ಯಶಸ್ವಿ 4 ನೇ ವಾರ

ಸರ್ಗಂ Sargam

ಪಾತ್ರ— ರೆಹನಾ, ರಾಜ ಕಪೂರ್, ನಾರೋ, ಮಮ್ತಾಜಲ್ಲಿ, ಹಿಂಪ್ರಕಾಶ್
ಸಕಲರೂ ನೋಡಬೇಕಾದ ಹಿಂದಿ ಚಿತ್ರ— ಪ್ರತಿ ದಿನ 3 ಪ್ರದರ್ಶನಗಳು

ಮುಂದಿನ ವಿನೋದ— "ನಿರಾಲ" — ಪಾತ್ರ : ಮಧುಬಾಲ, ದೇವಾನಂದ
ಬೆಳಗಿನ ಪ್ರದರ್ಶನ — 12—1—51 ರಿಂದ — 3 ದಿವಸಗಳು

ಅನೋಖಿ ಅದ (ಹಿಂದಿ) ಪಾತ್ರ— ಸಪ್ನೀಂ, ಸರೇಂದ್ರ

ಉಡ್‌ಲಾಂಡ್
ಲಿ ಸ
5—1—51 ರಿಂದ
DILRUBA
ದಿಲ್‌ರೂಬ

ದೇಹನ — ಕಕ್ಕು — ಯಾಕೂಬ್
ದೇವಾನಂದ್ ಅಭಿನಯಿಸಿರುವ
ಮನಮೋಹನ ಹಿಂದಿ ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 5—1—51 ರಿಂದ - 3 ದಿನಗಳು

ರಾಜನರ್ತಕಿ ಪಾತ್ರ— ಸಾಧನಬೋಸ್, ಪೃಥ್ವಿರಾಜ್
ಅತ್ಯಾಕರ್ಷಣೀಯ ಹಿಂದಿ ಚಿತ್ರ



'ಗೋರಕ್ಷಣ'

ತಿಂಗಳಿಗೊಂದಾವರ್ತಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ ಪ್ರಾಣಿದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು.

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ, ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನಿಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ : 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

ಲಂಡನ್ ಥೇಮ್ಸ್ ನದಿಯು ಮೇಲೆ ಕಟ್ಟಲಾಗುತ್ತಿರುವ ಸೇತುವೆ

Edited, Printed and Published by M. S. Krishna Rao, at the Satyavadi Press Chamarajapuram Mysore